ರೈತರಿಗೆ ಪುನರ್ವಸತಿ

24 (497), **ಶ್ರೀ ಕಿಮ್ಮನೆ ರತ್ನಾಕರ (ತೀರ್ಥಹಳ್ಳಿ)**

ಪ್ರಶ್ನೆ

ಅ) ತುಂಗಾ ಮೇಲ್ದಂಡೆ ನೀರಾವರಿ ಯೋಜನೆಯಿಂದ ಮುಳುಗಡೆಗೆ ಒಳಗಾದ ಬಹಳ ರೈತರಿಗೆ ಪುನರ್‌ವಸತಿ ಪರಿಹಾರ ನೀಡದಿರುವುದು, ಹೈ-ಪವರ್ ಕಮಿಟಿಗಳನ್ನು ನಡೆಸಿಲ್ಲದಿರುವುದು, ಮುಳುಗಡೆಗೊಳಗಾದ ರೈತರು ತಮ್ಮ ಬೇಡಿಕೆಗಾಗಿ ಹೋರಾಟಗಳನ್ನು ನಡೆಸುತ್ತಿರುವುದು ಸರ್ಕಾರ ಕೈಗೊಂಡ ಕ್ರಮಗಳೇನು ;

ಆ) ತುಂಗಾ ಮೇಲ್ದಂಡೆ ಯೋಜನೆಯಿಂದ ಮುಳುಗಡೆಯಾದವರಿಗೆ ಸರಕಾರಿ ಲೆಕ್ಕದಲ್ಲಿ ಪರಿಹಾರ ನೀಡದೆ, ಮುಳುಗಡೆಯಾದವರಿಗೆ ಸಾಗುವಳಿ ಜಮೀನುಗಳು ಮುಳುಗಡೆ ಆಗಿರುವುದು, ಅಧಿಕಾರಿಗಳು ನೀರನ್ನು ಡ್ಯಾಂ ನಿಂದ ಹೊರಗಡೆ ಬಿಟ್ಟು ರೈತರಿಗೆ ಸಾಗುವಳಿ ಮಾಡಲು ಬಿಡದಿರುವುದು ರೈತರಿಗೆ ಪರಿಹಾರ ನೀಡದಿರುವ ಬಗ್ಗೆ ಸರಕಾರದ ನಿಲುವೇನು?

ಶ್ರೀ ಬಸವರಾಜ ಬೊಮ್ಮಾಯಿ (ಜಲ ಸಂಪನ್ಮೂಲಸಚಿವರು)

ಉತ್ತರ

ಅ) ತುಂಗಾ ಮೇಲ್ದಂಡೆ ಯೋಜನೆ ಅಣೆಕಟ್ಟು ನಿರ್ಮಾಣದಿಂದಾಗಿ ಹಿನ್ನೀರಿನಿಂದ ಬಾದಿತವಾಗುವ ಪ್ರದೇಶದ ಸರ್ವೆ ಕಾರ್ಯ ಕೈಗೊಂಡು ಮುಳುಗಡೆಯಾಗುವ ಪ್ರದೇಶ/ ಸಂತ್ರಸ್ತರನ್ನು ಗುರುತಿಸಿದ್ದು, ಯೋಜನೆ ಪುನರ್ವಸತಿ ಮತ್ತು ಪುನರ್ನಿರ್ಮಾಣಕ್ಕಾಗಿ ರೂ.20.47 ಕೋಟಿಗಳ ಪ್ಯಾಕೇಜ್‌ಗೆ ಸರ್ಕಾರದ ಆದೇಶ ಸಂ: ಕಂ.ಇ: 113: ಆರ್.ಇ.ಹೆಚ್: 2003 ಬೆಂಗಳೂರು ದಿ: 01.12.2006 ರಲ್ಲಿ ಅನುಮೋದನೆಗೊಂಡಿರುತ್ತದೆ. ದಿನಾಂಕ: 08.12.2009 ರಂದು ಪುನರ್ವಸತಿ ಮತ್ತು ಪುನರ್ ನಿರ್ಮಾಣದ ಸಲಹಾ ಸಮಿತಿಯ ಪರಿಶೀಲನಾ ಸಭೆ ಜರುಗಿದ್ದು, ರೈತರು ತಮ್ಮ ಬೇಡಿಕೆಗಾಗಿ ಹೋರಾಟಗಳನ್ನು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದ್ದು, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಮತ್ತು ಪರಿಹಾರ ವಿತರಣೆ ಸಲುವಾಗಿ ಈ ಕೆಳಗಿನ ಕ್ರಮಗಳನ್ನು ಕೈಗೊಂಡು 15ನೇ ಜುಲೈ-2012 ರವರೆಗಿನ ಪ್ರಗತಿಯ ವಿವರ ಈ ಕೆಳಗಿನಂತಿದೆ:

ಕ್ರಮ.ಸಂ	ವಿವರಗಳು	ತುಂಗಾ ಮೇಲ್ದಂಡೆ ಯೋಜನೆ
ಅ	ಪ್ಯಾಕೇಜ್‌ನಲ್ಲಿರುವ ಅನುವುಗಳು	
1	ಭಾದಿತವಾಗುವ ಗ್ರಾಮಗಳು	ತುಂಗಾ ಮೇಲ್ದಂಡೆ ಯೋಜನೆ ಯಡಿ ಒಟ್ಟು 2 ಗ್ರಾಮಗಳಾದ ಕಣಗಾಲಕೊಪ್ಪ ಹಾಗೂ ಲಿಂಗಾಪುರ (ಕಟ್ಟಡಗಳು, ಜಮೀನು) ಭಾಗಶಃ ಭಾದಿತವಾಗುತ್ತಿದೆ. ಜೊತೆಗೆ ಬೊಮ್ಮೇನಹಳ್ಳಿ, ಮುತ್ತಿನಕೊಪ್ಪ ಗ್ರಾಮಗಳ ಜಮೀನುಗಳು ಭಾಗಶಃ ಬಾದಿತವಾಗುತ್ತಿದೆ.
2	ಭಾದಿತವಾಗುವ ಕುಟುಂಬಗಳು	ಕಣಗಾಲಕೊಪ್ಪ ಹಾಗೂ ಲಿಂಗಾಪುರ ಗ್ರಾಮಗಳ ಒಟ್ಟು 275 ಕುಟುಂಬಗಳು (148 ಮೂಲ ಕುಟುಂಬಗಳು) ಭಾದಿತವಾಗುತ್ತವೆ ಮತ್ತು ಭಾಗಶಃ ಮುಳುಗೆಯಾಗುವ ಬೊಮ್ಮೇನಹಳ್ಳಿ, ಮುತ್ತಿನಕೊಪ್ಪ ಗ್ರಾಮಗಳಲ್ಲಿ ಯಾವುದೇ ಕುಟುಂಬಗಳು ಭಾದಿತವಾಗಿರುವುದಿಲ್ಲ.
3	ಭಾದಿತವಾಗುವ ಜಮೀನುಗಳ ವಿವರ	ತುಂಗಾ ಮೇಲ್ದಂಡೆ ಯೋಜನೆ ಹಿನ್ನೀರಿನಿಂದ 145.22 ಎಕರೆ ಖಾತಾ ಜಮೀನು ಮುಳುಗಡೆ ಯಾಗುತ್ತದೆ ಮತ್ತು 441-00 ಎಕರೆ ಬಗರ್ ಹುಕುಂ ಸಾಗುವಳಿ ಮತ್ತು ರೀಗ್ರ್ಯಾಂಟ್ ಜಮೀನು ಭಾದಿತವಾಗುತ್ತದೆ.

ಆ	ಇದುವರೆಗೆ ಪರಿಹಾರ ನೀಡಲಾದ ವಿವರ	
1	ಕಟ್ಟಡ ಮತ್ತು ನಿವೇಶನಗಳು	ತುಂಗಾ ಮೇಲ್ದಂಡೆ ಯೋಜನೆ ಹಿನ್ನೀರಿನಿಂದ ಲಿಂಗಾಪುರ ಮತ್ತು ಕಣಗಾಲಕೊಪ್ಪ ಗ್ರಾಮಗಳು ಭಾಗಶಃ ಭಾದಿತವಾಗುತ್ತಿದ್ದು, ಒಟ್ಟು 175 ಕಟ್ಟಡಗಳು, 21 ನಿವೇಶನಗಳು (ಒಟ್ಟು 196 ಸ್ವತ್ತುಗಳು) ಭಾದಿತವಾಗಿರುತ್ತವೆ. ಇದಕ್ಕಾಗಿ ರೂ. 14.99 ಕೋಟಿ ಬಿಡುಗಡೆ ಮಾಡಲಾಗಿದ್ದು, ಈ ಪೈಕಿ ಈಗಾಗಲೇ ರೂ 10.23 ಕೋಟಿ ಪಾವತಿಸಲಾಗಿದೆ. ಬಾಕಿ ಇರುವ ರೂ. 4.76 ಕೋಟಿ ಪಾವತಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

2	ನಿವೇಶನ ಹಂಚಿಕೆ	ಪುನರ್ವಸತಿ ಕೇಂದ್ರದಲ್ಲಿ ಎಲ್ಲಾ 275 ಕುಟುಂಬಗಳಿಗೆ ನಿವೇಶನಗಳನ್ನು ರೂ.3.08 ಕೋಟಿ ಮೊತ್ತದಲ್ಲಿ ರಚಿಸಲಾಗಿದ್ದು ಎಲ್ಲಾ ಸಂತ್ರಸ್ಥರಿಗೆ ನಿವೇಶನ ಹಂಚಿಕೆ ಮಾಡಿದ್ದು ಇಲ್ಲಿಯವರೆಗೆ 223 ಸಂತ್ರಸ್ಥರಿಗೆ ಹಕ್ಕುಪತ್ರಗಳನ್ನು ವಿತರಿಸಲಾಗಿದೆ. ಉಳಿದ 52 ಸಂತ್ರಸ್ಥರಿಗೆ ಹಕ್ಕು ಪತ್ರ ವಿತರಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.
3	ಬಗರ್‌ಹುಕಂ ಮತ್ತು ರೀಗ್ರಾಂಟ್ ಜಮೀನಿಗೆ ಪರಿಹಾರ	ಹಿನ್ನೀರಿನಿಂದ ಭಾದಿತವಾಗುವ ಬಗರ್‌ಹುಕಂ/ ರೀಗ್ರಾಂಟ್ ಜಮೀನುಗಳಿಗೆ ಕಂದಾಯ ಜಮೀನುಗಳಿಗೆ ನೀಡುವ 2/3 ಭಾಗದಷ್ಟು ಅನುಗ್ರಹ ಅನುದಾನವನ್ನು ನೀಡಲು ಪ್ಯಾಕೇಜ್‌ನಲ್ಲಿ ಅನುವು ಮಾಡಿದ್ದು, ಇಲ್ಲಿಯವರೆಗೆ 61–32 ಎಕರೆ ಪ್ರದೇಶಕ್ಕೆ ರೂ. 9.60 ಲಕ್ಷ ಪರಿಹಾರ ಪಾವತಿಸಿದ್ದು, ಉಳಿದ ಪ್ರಕರಣಗಳಿಗೆ ಪರಿಹಾರ ಪಾವತಿಗಾಗಿ ದಾಖಲಾತಿಗಳನ್ನು ಪಡೆದು ಪರಿಶೀಲಿಸಲಾಗುತ್ತಿದ್ದು, ಶೀಘ್ರ ಪರಿಹಾರ ಪಾವತಿಗೆಕ್ರಮ ಕೈಗೊಳ್ಳಲಾಗುತ್ತಿದೆ.
4	ಇತರೆ ಸೌಲಭ್ಯಗಳು	ಸ್ಥಳಾಂತರಗೊಂಡಿರುವ 64 ಜನರಿಗೆ ಮನೆ ಗ್ರಾಂಟ್ ತಲಾ ರೂ 25000 ರಗಳು, 3 ಜನರಿಗೆ ಸಾರಿಗೆ ವೆಚ್ಚ ತಲಾ ರೂ. 1000ಗಳು ಹಾಗೂ 4 ಜನ ಕುಶಲಕರ್ಮಿಗಳಿಗೆ ತಲಾ ರೂ. 20,000ಗಳಂತೆ ಒಟ್ಟು ರೂ 21.83 ಲಕ್ಷಗಳನ್ನು ವಿತರಿಸಲಾಗಿದ್ದು, ಮೇಲಿನ ಎಲ್ಲಾ ಅಂಶಗಳಂತೆ ಒಟ್ಟಾರೆ ರೂ. 13.427 ಕೋಟಿಗಳ ಪ್ರಗತಿ ಸಾಧಿಸಲಾಗಿದೆ.

ಭೂಸ್ವಾಧೀನದ ವಿವರ :-

ಹಿನ್ನೀರಿನಲ್ಲಿ ಪ್ರಾಥಮಿಕ ಪ್ರಸ್ತಾವನೆಯಂತೆ ಗುರುತಿಸಿದ್ದ 145.22 ಎಕರೆ ಭಾದಿತ ಪ್ರದೇಶವು ಜಂಟಿ ತಪಾಸಣೆಯ ಬಳಿಕ ಇದು 108.10 ಎಕರೆ ಪ್ರದೇಶವಾಗುತ್ತಿದ್ದು, ಇದರಲ್ಲಿ ಈಗಾಗಲೇ 25.29 ಎಕರೆ ಪ್ರದೇಶಕ್ಕೆ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಂಡು ರೂ. 0.69 ಕೋಟಿ ಪರಿಹಾರ ಪಾವತಿಸಿದ್ದು ಉಳಿದ 82.21 ಎಕರೆ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತದ ಪ್ರಗತಿಯಲ್ಲಿದ್ದು, ಶೀಘ್ರ ಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ಮೇಲಿನಂತೆ, ಪುನರ್ವಸತಿ ಮತ್ತು ಪುನರ್ ನಿರ್ಮಾಣ ಪ್ಯಾಕೇಜ್ ಅನುಷ್ಠಾನ ಹಾಗೂ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿದ್ದು, ಹಿನ್ನೀರಿನಿಂದ ಭಾದಿತರಾಗುವ ಸಂತ್ರಸ್ಥರಿಗೆ ಶೀಘ್ರ ಪರಿಹಾರ ಪಾವತಿಗೆ ಕ್ರಮ ಕೈಗೊಳ್ಳಲಾಗುತ್ತಿದೆ.

ಸಣ್ಣ ನೀರಾವರಿಗಳ ಯೋಜನೆಗಳ ಅನುಷ್ಠಾನ

12(346)

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ)

ಪ್ರಶ್ನೆ

ಅ) ಕಳೆದ 3 ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯ ಯಾವ ಸ್ಥಳಗಳಲ್ಲಿ ರಾಜ್ಯ ಸರ್ಕಾರದ ನೆರವು ಹಾಗೂ ಕೇಂದ್ರ ಸರ್ಕಾರದ ಎ.ಐ.ಬಿ.ಪಿ. ಯೋಜನೆಯಡಿಯಲ್ಲಿ ಜಾರಿಗೊಳಿಸಲಾಗುತ್ತಿರುವ ಸಣ್ಣ ನೀರಾವರಿ ಯೋಜನೆಗಳು ಯಾವುವು; (ವಿಧಾನ ಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಆ) ಈ ಯೋಜನೆಗಳನ್ನು ಕಾರ್ಯಗತ ಗೊಳಿಸಲು ತಗಲುವ ಅಂದಾಜು ವೆಚ್ಚವೆಷ್ಟು; ಇದಕ್ಕಾಗಿ ಇಲ್ಲಿಯವರೆಗೆ ಪ್ರತಿ ವರ್ಷ ರಾಜ್ಯ ಹಾಗೂ ಕೇಂದ್ರ ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು; (ರಾಜ್ಯ ಮತ್ತು ಕೇಂದ್ರದ ಅನುದಾನದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು);

ಇ) ಸದರಿ ಯೋಜನೆ ಪೂರ್ಣಗೊಳ್ಳಲು ಇನ್ನೂ ಎಷ್ಟು ಸಮಯಾವಕಾಶದ ಅಗತ್ಯವಿದೆ; ಯೋಜನೆ ಪೂರ್ಣಹೊಂಡ ನಂತರ ಜಿಲ್ಲೆಯ